# ಹರಿಚಿತ್ತದ ಹಾದಿಗುಂಟ ಸಾಗಿದೆ ಬದುಕು!



**ಎಂ.ಜಿ. ನರೇಶ್**
ಉದಯ 'ಕಸ್ತೂರಿನಿವಾಸ'ದ ಮಹಾನಂದಿ

◆ **ನಟನೇ ಯಾಕೆ ಆಗಿದ್ದು ಅಂತ ಕೇಳಿದರೆ...?**

ಅದು ನನಗೆ ಪ್ಯಾಶನ್ ಅಂತ ಅನ್ನಿಸುತ್ತದೆ. ನಟ ಆಗದಿದ್ದರೆ ಏನಾಗುತ್ತಿದ್ದೆನೋ ಗೊತ್ತಿಲ್ಲ. ನಟ ಆಗುವುದು ವಿಧಿ ಲಿಖಿತ ಇರಬಹುದು. ಚಿಕ್ಕವಯಸ್ಸಿನಲ್ಲೇ ನಟ ಆಗಬೇಕು ಎನ್ನುವ ಬಯಕೆ ಇತ್ತು. ತಾತ ವರದರಾಜರ ನಾಟಕ ಕಂಪನಿಯಲ್ಲಿ ಇದ್ದರು. ಅವರು ಪೌರಾಣಿಕ ನಾಟಕಗಳನ್ನು ಆಡುತ್ತಿದ್ದರಂತೆ. ಚಿಕ್ಕವನಿದ್ದಾಗ ನಾಟಕಗಳ ಡೈಲಾಗ್ ಹೇಳಿಕೊಡುತ್ತಿದ್ದರು. ಎಲ್ಲೋ ಒಂದು ಕಡೆ ನಟನೆ ರಕ್ತಗತವಾಗಿತ್ತು ಎಂದೆನಿಸುತ್ತದೆ.

◆ **ಕಲಾವಿದರಾಗಲು ಪ್ರೇರಕವಾದ ಸನ್ನಿವೇಶಗಳನ್ನು ಸ್ಮರಿಸಬಹುದಾ?**

ಭೌತಿಕ ಸಂದರ್ಭಗಳು ನನಗೆ ಎದುರಾಗಲಿಲ್ಲ. ನನ್ನ ಮನಸ್ಸಿನಲ್ಲಿ ನಟನೆಯ ಉತ್ಕಟ ಅಭಿಲಾಷೆ ಇತ್ತು. ಆ ಉತ್ಸಾಹ ಒಂದಾದರೆ, ಸಿನಿಮಾಗಳನ್ನು ಹೆಚ್ಚಾಗಿ ನೋಡುತ್ತಿದ್ದೆ. ಕನ್ನಡಿ ಮುಂದೆ ಅದನ್ನು ಅನುಕರಿಸುತ್ತಿದ್ದೆ. ಬಹುಶಃ ಇಂತಹ ಸಂದರ್ಭ ಪ್ರೇರಣೆ ಆಗಿರಬಹುದು. ಸಣ್ಣದಾಗಿ ಹುಟ್ಟಿದ ಬಯಕೆ ಚಿಗುರಿ ದೊಡ್ಡದಾಗಿದೆ ಎಂದೆನಿಸುತ್ತದೆ. ಸಣ್ಣ ಸಣ್ಣ ಅವಕಾಶಗಳು ಇಲ್ಲಿಯತನಕ ಕರೆತಂದಿವೆ ಎನ್ನಬಹುದು.

◆ **ನಿಮ್ಮ ಕಲಾ ಮತ್ತು ಖಾಸಗಿ ಬದುಕಿನ ಚಿತ್ರ ನೀಡಬಹುದಾ?**

ನನ್ನ ತಂದೆ ಗೋಪಿನಾಥ ರಾವ್ ಎಂ.ಎ. ಮುನ್ಸಿಪಲ್ ಶಾಲೆ ಶಿಕ್ಷಕರಾಗಿದ್ದರು. ಬಾಲ್ಯದಲ್ಲಿ ಅನೇಕ ಪಟ್ಟಣ ಸುತ್ತಾಡಿದೆ. ನಾನು ಹುಟ್ಟಿದ್ದು ದೊಡ್ಡಬಳ್ಳಾಪುರದಲ್ಲಿ. ಪ್ರಾಥಮಿಕ ಶಿಕ್ಷಣ ಪಾವಗಡದಲ್ಲಿ ಮಾಡಿದೆ. ಅಲ್ಲಿ ತೆಲುಗು ಸಿನಿಮಾಗಳನ್ನು ನೋಡುವ ಅವಕಾಶ ಸಿಕ್ಕಿತ್ತು. ನಂತರ ತುರುವೇಕೆರೆಗೆ ಬಂದೆವು. ಪ್ರೌಢಶಾಲೆಯನ್ನು ಅಲ್ಲೇ ಮುಗಿಸಿದೆ. ಅಲ್ಲಿ ನನಗೊಂದು ಸಾಂಸ್ಕೃತಿಕ ಜೀವನವೂ ಆರಂಭವಾಯಿತು. ಪಿಯುಸಿ ಓದಲು ಬೆಂಗಳೂರಿಗೆ ಬಂದೆ. ನಂತರ ಎಂಜಿನಿಯರಿಂಗ್ ಸೇರಿದೆ. ಆಗಲೇ ರವೀಂದ್ರ ಕಲಾಕ್ಷೇತ್ರದತ್ತ ಬಂದೆ. ಹವ್ಯಾಸಿ ರಂಗ ತಂಡದ ಸಹವಾಸ ಮಾಡಿದೆ. ಆಗ ಸಣ್ಣ ಬುದ್ಧಿವಾದದ ಮಾತುಗಳು ಕೇಳಿ ಬಂದವು. 'ಎಂಜಿನಿಯರ್ ಆಗುವುದು ಬಿಟ್ಟು ಇಲ್ಲಿಗೆ ಬಂದು ಏಕೆ ಜೀವನ ಹಾಳುಮಾಡಿಕೊಳ್ಳುತ್ತೀಯಾ' ಎಂದರು. ಸಣ್ಣಪುಟ್ಟ ಪಾತ್ರಗಳ ಮೂಲಕ ಬಣ್ಣ ಹಚ್ಚಿದೆ. 1986ರಲ್ಲಿ ದೂರದರ್ಶನದಲ್ಲಿ ನಾಟಕ ಆರಂಭವಾಯಿತು. ಅದಕ್ಕೂ ಮುನ್ನ ರೇಡಿಯೊ ಕಲಾವಿದನಾಗಿದ್ದೆ. ಅಲ್ಲಿ ವೃತ್ತಿ ಬದುಕಿಗೆ ತಿರುವು ನೀಡಿದ್ದು ಯಮುನಾಮೂರ್ತಿ.

ಅವರೇ ನನ್ನ ಹೆಸರನ್ನು ದೂರದರ್ಶನಕ್ಕೆ ಶಿಫಾರಸ್ಸು ಮಾಡಿದ್ದರು. ಅಲ್ಲಿ ದೊಡ್ಡ ಕಲಾವಿದರ ಜೊತೆ ಕೆಲಸಮಾಡುವ ಅವಕಾಶ ಸಿಕ್ಕಿತು. ಐದಾರು ವರ್ಷದ ನಂತರ ವೈಯಕ್ತಿಕ ಕಾರಣಗಳಿಂದ ಹಿಂದೆ ಸರಿಯಬೇಕಾಯಿತು. ಆಗ ಒಂದಿಷ್ಟು ಕಾಲ ಮನೆಯಲ್ಲಿ ಇರ್ತಾ ಇದ್ದೆ. ಯಾರಾದರೂ ನಾಟಕಕ್ಕೆ ಕರೆದರೆ, ಮಾನಸಿಕ ಶಕ್ತಿ ತುಂಬಬಲ್ಲದು ಎಂದು ಪಾತ್ರ ಮಾಡ್ತಾ ಇದ್ದೆ. ಸುಮಾರು ಹತ್ತು ವರ್ಷ ಪರದೆಯಾ ಆಚೆ ಉಳಿದಿದ್ದೆ. ಅಷ್ಟರಲ್ಲಿ ಈ ಟೀವಿ ಆರಂಭವಾಗಿತ್ತು. 'ಮನ್ವಂತರ' ಶುರುವಾಗಿತ್ತು. ಸೀತಾರಾಂ ಅವರ ತಂಡದಲ್ಲಿ ಕೆಲಸ ಮಾಡಬೇಕು ಎನ್ನುವ ಆಶೆ ಹುಟ್ಟಿತು.

'ಮಂಥನ'ವನ್ನು ಸೇತುರಾಮ್ ಆರಂಭಿಸಿದರು. ದೂರದರ್ಶನದಲ್ಲಿ ಉಮೇಶ್ ಎನ್ನುವವರು ಮೇಕಪ್ ಅಧಿಕಾರಿಯಾಗಿದ್ದರು. ಅವರು ಸೇತುರಾಮ್ ಗೆಳೆಯರು ಹೌದು. ಅವರೇ ನನ್ನ ಕಲಾ ಜೀವನಕ್ಕೆ ಎರಡನೇ ತಿರುವು ನೀಡಿದರು. ಅವತ್ತು ಅವರು ಒತ್ತಾಯ ಮಾಡದೆ ಹೋಗಿದ್ದರೆ ನಾನು ಮತ್ತೆ ತೆರೆಗೆ ಬರುತ್ತಿರಲಿಲ್ಲ ಎಂದೆನಿಸುತ್ತದೆ. ನನ್ನ ನಿರ್ಧಾರ ಬದಲಿಸಲು ನನ್ನ ಪತ್ನಿ ಕೂಡ ಪ್ರೇರಕ ಶಕ್ತಿಯಾದರು. ನನ್ನ ಮೊದಲ ಮಗ ಹುಟ್ಟಿನಿಂದಲೇ ಮಾನಸಿಕ ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದ. ಹಾಗಾಗಿ ನಾನು ಅವನ ಜೊತೆ ಹೆಚ್ಚಿನ ಸಮಯ ಕಳೆದೆ. ಸೇತುರಾಮ್ ಅವಕಾಶ ಕೊಟ್ಟರು. ನನ್ನ ಅಳುಕಿನಲ್ಲಿ ಮೊದಲ ಶಾಟ್ ಹತ್ತು ಹನ್ನೆರಡು ಅವಕಾಶ ತೆಗೆದುಕೊಂಡಿತು. ಆಗ ಹಿಂಜರಿಕೆಯ ಮನೋಭಾವದಲ್ಲಿ ಬೇಡ ಅಂದೆ, ಆದರೆ ಮಾಡು ಎನ್ನುವ ಒತ್ತಾಯ ತಂಡದಲ್ಲಿ ಮೂಡಿತು. ಅದನ್ನು ಮುಗಿಸಿದ ತಕ್ಷಣ ಸೀತಾರಾಂ ಅವರ 'ಮಿಂಚು' ಮಾಡಿದೆ. 'ಮಳೆಬಿಲ್ಲು' ಮಾಡಿದೆ. 'ಮುಕ್ತಮುಕ್ತ' ಆರಂಭವಾಯಿತು. ನನಗೆ ದೊಡ್ಡ ಪಾತ್ರ ಬೇಡ ಅಂದೆ ಆದರೆ ದೊಡ್ಡ ಪಾತ್ರ ರಂಜನ್‌ಲಾಲ್ ಮಿಶ್ರನಾಗಿ ಮಾಡಿದೆ. ಅದು ಹೆಸರು ತಂದು ಕೊಡ್ತು. ಅದಾದ ಮೇಲೆ ಕೆಲವು ದಿನ ಯಾರೂ ಕರೆಯಲೇ ಇಲ್ಲ. 'ಚಿತ್ರಲೇಖ' ಪಾತ್ರ ಮಾಡಿದೆ. ಅದರಲ್ಲಿ ಇಬ್ಬರು ಸೊಸೆಯರ ಆದರ್ಶ ಮಾವನ ಪಾತ್ರ, ವೃತ್ತಿಯಿಂದ ಪತ್ರಕರ್ತ. ಮುಕ್ತ ಮುಕ್ತಕ್ಕಿಂತ ಭಿನ್ನ ಪಾತ್ರ ಅದಾಗಿತ್ತು. 'ಮಹಾಪರ್ವ' 'ರಾಧಾಕಲ್ಯಾಣ' ಈಗ 'ಕಸ್ತೂರಿನಿವಾಸ' ಮಾಡುತ್ತಿದ್ದೇನೆ.

◆ **ಉದ್ಯೋಗವನ್ನು ಬಿಟ್ಟು ಏಕೆ ಕಲಾವಿದನಾದೆ ಎಂದು ಅನ್ನಿಸಿದ್ದು ಇದೆಯಾ? ಕಸ್ತೂರಿನಿವಾಸ ಹೇಗಿದೆ?**

ಖಂಡಿತ ಹಾಗೆ ಅನ್ನಿಸಿಲ್ಲ. ಇದೊಂದು ರೀತಿಯಲ್ಲಿ ಆತ್ಮ ತೃಪ್ತಿಕೊಡುವ ಕೆಲಸ. ಯಾವತ್ತೂ ನಮಗೆ ಇಷ್ಟವಾದ ಕೆಲಸ ಮಾಡುವುದು ಸಮಾಧಾನವನ್ನು ನೀಡುತ್ತದೆ. ಹಣ ಸಂಪಾದನೆ ಒಂದು ಭಾಗ. ಆತ್ಮತೃಪ್ತಿ ಕೊಡುವ ಕೆಲಸ ಸಂಪಾದನೆಯನ್ನೂ ತಂದುಕೊಡುತ್ತಿರುವಾಗ ಅದೇ ಆಯ್ಕೆ ಉತ್ತಮ ಅಲ್ಲವೇ? ಹೀಗಾಗಿ ಇದಕ್ಕೆ ನನ್ನನ್ನು ನಾನು ಒಗ್ಗಿಸಿಕೊಂಡೆ.

ಪಾತ್ರ ತುಂಬ ಚೆನ್ನಾಗಿದೆ. ಸಾಮಾನ್ಯವಾಗಿ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆಯ ಪಾತ್ರ ಇರುತ್ತದೆ ಎಂದು ಹೇಳುತ್ತಾರೆ. ಇಲ್ಲಿ ಗಂಡನಾಗಿ ಹೆಂಡತಿಗೆ ಬೆಂಬಲವನ್ನು ನೀಡಿ ಆಕೆಯನ್ನು ಬೆಳೆಸುವ ಪಾತ್ರ. ಸಂಸಾರ ನಿಭಾಯಿಸಲು ಹೆಂಡತಿ ಎಷ್ಟು ಶ್ರಮಿಸುತ್ತಾಳೆ. ಅಂತಹವಳ ಏಳಿಗೆಗೆ ಶ್ರಮಿಸುವ ಪಾತ್ರಗಳು ಸಿಕ್ಕಾಗ ಖುಷಿ ಆಗುತ್ತದೆ. ನನಗೆ ಗೊತ್ತಿರುವಷ್ಟು ಜ್ಞಾನವನ್ನು ಹಾಕಿ ಪಾತ್ರಕ್ಕೆ ನ್ಯಾಯ ನೀಡುತ್ತಿದ್ದೇನೆ. ಕಥೆಯ ಹಂದರ ತುಂಬ ಚೆನ್ನಾಗಿದೆ. ಪಾತ್ರಕ್ಕೆ ತುಂಬಾ ಛಾಯೆಗಳಿವೆ. ನನ್ನನ್ನು ಹರಿಚಿತ್ತ ಎಂದು ಕರೆಯುತ್ತಾರೆ. ನಾನು ಏನೆಲ್ಲ ಮಾಡಿದ್ದರೂ ಅದು ಪರಮಾತ್ಮನ ಕೃಪೆ. ಹರಿಚಿತ್ತದ ಹಾದಿಗುಂಟ ಬದುಕು ಸಾಗಿದೆ.

■ **ರಾಘವೇಂದ್ರ ಕೆ.**